ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪ್ರ.ಸ./2017–18 /116-18

ದಿನಾಂಕ: 26.06.2018

ಮಾನ್ಯರೇ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ನಲವತ್ತಾರನೆಯ** ಸಭೆಯು ದಿನಾಂಕ: **22.06.2018ರ ಶುಕ್ರವಾರ ಪೂರ್ವಾಹ್ನ 11.00 ಗಂಟೆಗೆ** ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು. ಈ ಪತ್ರದೊಂದಿಗೆ ಆ ದಿನ ನಡೆದ ಸಭೆಯ ನಡಾವಳಿಯನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡಲಾಗಿದೆ.

ಈ ಸಭೆಯ ನಡಾವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರ ತಲುಪಿದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

Swilpa
ಕುಲಸಚಿವರು
ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು – 560018.

ಇವರಿಗೆ,

1. **ಶ್ರೀಮತಿ ಸುಜಾತ ಗೌಡ**, # 30, 7ನೇ ಹಂತ, 2ನೇ ಮುಖ್ಯರಸ್ತೆ, ಬಿ.ಇ.ಎಂ.ಎಲ್. ಲೇಔಟ್, ಮೈಲಸಂದ್ರ, ಕೆಂಗೇರಿ, ಬೆಂಗಳೂರು – 560059.
2. **ಶ್ರೀ ಶಿವಕುಮಾರ್ ಎನ್.**, # 109, 2ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಪಾಂಡುರಂಗ ಬಡಾವಣೆ, ಅರಕೆರೆ ಗೇಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560076.
3. **ಪ್ರಧಾನ ಕಾರ್ಯದರ್ಶಿಗಳು**, ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು–560001
4. **ಅಪರ ಮುಖ್ಯ ಕಾರ್ಯದರ್ಶಿಗಳು**, ಹಣಕಾಸು ಇಲಾಖೆ, ವಿಧಾನಸೌಧ, ಬೆಂಗಳೂರು–560001
5. **ಸರ್ಕಾರದ ಕಾರ್ಯದರ್ಶಿ**, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು–560001
6. **ಪ್ರಾದೇಶಿಕ ನಿರ್ದೇಶಕರು**, ಯುಜಿಸಿ–ನೈಋತ್ಯ ಪ್ರಾದೇಶಿಕ ಕೇಂದ್ರ, ಪ್ರಸನ್ನಕುಮಾರ್ ಬ್ಲಾಕ್, ಅರಮನೆ ರಸ್ತೆ, ಬೆಂಗಳೂರು–09,
7. **ನಿರ್ದೇಶಕರು**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು–570001.
8. **ಆಯುಕ್ತರು**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002.
9. **ಆಯುಕ್ತರು**, ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001
10. **ನಿರ್ದೇಶಕರು**, ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ ಬೆಂಗಳೂರು–560001
11. **ನಿರ್ದೇಶಕರು**, ಪದವಿಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012
12. **ನಿರ್ದೇಶಕರು**, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009
13. **ಆಯುಕ್ತರು**, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001

ಪ್ರತಿಗಳು:

1. **ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು**, ರಾಜಭವನ, ಬೆಂಗಳೂರು – 560001
2. **ಮಾನ್ಯ ಕುಲಪತಿಯವರ ಆಪ್ತಶಾಖೆ**, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
3. ಕಛೇರಿ ಪ್ರತಿ
4. ರಕ್ಷತಾ ಪ್ರತಿ

ದೂರವಾಣಿ: 080 – 26701303 / 26705387; ಇ-ಮೇಲ್: karnatakasanskrituniversity@gmail.com
दूरवाणी: ०८०-२६७०१३०३; २६७०५३८७; ई-सङ्केत: – karnatakasanskrituniversity@gmail.com

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## 22.06.2018ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) 46ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ 46ನೇ ಸಭೆಯು** ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಜೂನ್ 21, 2018ರ ಶುಕ್ರವಾರ ಪೂರ್ವಾಹ್ನ 11.00** ಗಂಟೆಗೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | |
|---|---|
| ೧. **ಪ್ರೊ. ಪದ್ಮಾಶೇಖರ್**, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. **ಶ್ರೀಮತಿ ಸುಜಾತ ಗೌಡ**, ಬೆಂಗಳೂರು | ಸದಸ್ಯರು |
| ೩. **ಶ್ರೀ ಶಿವಕುಮಾರ್ ಎನ್.**, ಬೆಂಗಳೂರು | ಸದಸ್ಯರು |
| ೪. **ಶ್ರೀ ಆರ್ ಸೋಮಶೇಖರ್**, ಉಪ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೫. **ನಿರ್ದೇಶಕರು**, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001<br>– ಪರವಾಗಿ **ಶ್ರೀಮತಿ ಜಾಹ್ನವಿ**, ಹಿರಿಯ ಸಹಾಯಕ ನಿರ್ದೇಶಕರು | ಸದಸ್ಯರು |
| ೬. **ಶ್ರೀಮತಿ ಎಂ. ಶಿಲ್ಪ**, ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | |
|---|---|
| ೧. **ಅಪರ ಮುಖ್ಯ ಕಾರ್ಯದರ್ಶಿಗಳು**, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೨. **ಕಾರ್ಯದರ್ಶಿಗಳು**, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೩. **ಪ್ರಾದೇಶಿಕ ನಿರ್ದೇಶಕರು**, ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು–09 | ಸದಸ್ಯರು |
| ೪. **ನಿರ್ದೇಶಕರು**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. **ಆಯುಕ್ತರು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. **ಆಯುಕ್ತರು**, ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001 | ಸದಸ್ಯರು |
| ೭. **ನಿರ್ದೇಶಕರು**, ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು–560001 | ಸದಸ್ಯರು |
| ೮. **ನಿರ್ದೇಶಕರು**, ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು–560012 | ಸದಸ್ಯರು |
| ೯. **ನಿರ್ದೇಶಕರು**, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009 | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಂಡಿತವಾಗಿ ನಿರ್ಣಯಗೊಂಡವು.

| ವಿ.ಸಂ. | ವಿಷಯ, ಟಿಪ್ಪಣಿ ಮತ್ತು ನಿರ್ಣಯ | |
|---|---|---|
| ವಿಷಯ 01 | ವಿಷಯ ಮತ್ತು ಟಿಪ್ಪಣಿ | **ಪ್ರಶಾಸನ ಸಮಿತಿ 45ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 45ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 16.03.2018ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು ಪ್ರಶಾಸನ ಸಮಿತಿ 45ನೇ ಸಭೆಯ ಅನುಪಾಲನಾ ವರದಿಯನ್ನು ಪರಿಶೀಲಿಸಿ, ಒಪ್ಪಿಗೆಯನ್ನು ನೀಡಿತು.** |
| ವಿಷಯ 02 | ವಿಷಯ ಮತ್ತು ಟಿಪ್ಪಣಿ | **'ಹಣಕಾಸು ಸಮಿತಿ' 29ನೇ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಹಣಕಾಸು ಸಮಿತಿ' 29ನೇ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 31.05.2018 ರಂದು ಕರೆಯಲಾಗಿತ್ತು. ಆ ಸಭೆಯ ನಡಾವಳಿಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ. |
| | ನಿರ್ಣಯ | **ಸಭೆಯು 'ಹಣಕಾಸು ಸಮಿತಿ' 29ನೇ ಸಭೆಯ ನಡಾವಳಿಗಳನ್ನು ಅನುಮೋದಿಸಿತು.** |
| ವಿಷಯ 03 | ವಿಷಯ ಮತ್ತು | **'ಪ್ರಶಿಕ್ಷಣ ಪರಿಷತ್' 23ನೇ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಪ್ರಶಿಕ್ಷಣ ಪರಿಷತ್' 23ನೇ ಸಭೆಯನ್ನು ಮಾನ್ಯ ಕುಲಪತಿಗಳ |

| | | |
|---|---|---|
| | ಟಿಪ್ಪಣಿ | ಅಧ್ಯಕ್ಷತೆಯಲ್ಲಿ ದಿನಾಂಕ: 21.06.2018 ರಂದು ಕರೆಯಲಾಗಿತ್ತು. ಆ ಸಭೆಯ ನಡಾವಳಿಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ. |
| | ನಿರ್ಣಯ | **ಸಭೆಯು 'ಪ್ರಶಿಕ್ಷಣ ಪರಿಷತ್' 23ನೇ ಸಭೆಯ ನಡಾವಳಿಗಳನ್ನು ಅನುಮೋದಿಸಿತು.** |
| ವಿಷಯ 04 | ವಿಷಯ ಮತ್ತು ಟಿಪ್ಪಣಿ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಕಟ್ಟಡ ಸಲಹಾ ಸಮಿತಿ ಸಭೆ'ಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **'ಕಟ್ಟಡ ಸಲಹಾ ಸಮಿತಿ'** ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 01.06.2018 ರಂದು ಕರೆಯಲಾಗಿತ್ತು. ಆ ಸಭೆಯ ನಡಾವಳಿಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ. |
| | ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಕಟ್ಟಡ ಸಲಹಾ ಸಮಿತಿ ಸಭೆ'ಯ ನಡಾವಳಿಯನ್ನು ಪರಿಶೀಲಿಸಲಾಯಿತು. 25 ಲಕ್ಷ ಮೊತ್ತವನ್ನು ಬಿಡುಗಡೆ ಮಾಡಲು ಸಭೆಯು ಒಪ್ಪಿಗೆ ಸೂಚಿಸಿತು.** |
| ವಿಷಯ 05 | ವಿಷಯ ಮತ್ತು ಟಿಪ್ಪಣಿ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ ಕಟ್ಟಡ ನಿರ್ಮಾಣ ಮಾಡಲು ಒಪ್ಪಿಗೆ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ ವಿಶ್ವವಿದ್ಯಾಲಯದ ಅಭಿವೃದ್ಧಿ ಅನುದಾನದ ಉಳಿಕೆ ಹಣದಲ್ಲಿ 2 ಕೋಟಿ ಅಂದಾಜು ವೆಚ್ಚದಲ್ಲಿ ಕಟ್ಟಡ ನಿರ್ಮಿಸಲು ಯೋಚಿಸಲಾಗಿದೆ. ಈ ಕಾಮಗಾರಿಯ ನಿರ್ಮಾಣಕ್ಕಾಗಿ "ಬೆಂಗಳೂರು ನಿರ್ಮಿತಿ ಕೇಂದ್ರ"ದವರು ನೀಲನಕ್ಷೆ ತಯಾರಿಸಿ ಸಲ್ಲಿಸಿದ್ದಾರೆ. ಇದನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ. |
| | ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ 1,35,19,000 ವೆಚ್ಚದಲ್ಲಿ ಕಟ್ಟಡ ನಿರ್ಮಾಣ ಮಾಡಲು ಒಪ್ಪಿಗೆ ನೀಡಿತು.** |
| ವಿಷಯ 06 | ವಿಷಯ ಮತ್ತು ಟಿಪ್ಪಣಿ | **ರಾಜ್ಯದ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ಖಾಲಿ ಇದ್ದ ಬ್ಯಾಕ್-ಲಾಗ್ ಹುದ್ದೆಗಳನ್ನು ಭರ್ತಿ ಮಾಡಿದ್ದಕ್ಕೆ ಘಟನೋತ್ತರ ಅನುಮತಿ ನೀಡುವ ಬಗೆಗೆ.**<br>ರಾಜ್ಯದ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ಖಾಲಿ ಇದ್ದ ಬ್ಯಾಕ್-ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ 25ನೇ ಪ್ರಶಾಸನ ಸಮಿತಿಯ ಸೂಚನೆಯಂತೆ ಒಂದು ಉಪ ಸಮಿತಿ ರಚಿಸಲಾಗಿತ್ತು. ಈ ಸಮಿತಿಯು ನೀಡಿದ ವರದಿಯನ್ವಯ 22 ಸಂಸ್ಕೃತ ಪಾಠಶಾಲೆಗಳಲ್ಲಿ ಖಾಲಿ ಇದ್ದ ಬ್ಯಾಕ್- ಲಾಗ್ ಹುದ್ದೆಗಳನ್ನು ಭರ್ತಿ ಮಾಡಿದ್ದು, ನೇಮಕಾತಿಯಾಗಿರುವ ಹುದ್ದೆಗಳಿಗೆ ಪ್ರಶಾಸನ ಸಮಿತಿಯ ಘಟನೋತ್ತರ ಅನುಮತಿಗಾಗಿ ಮಂಡಿಸಿದೆ. |
| | ನಿರ್ಣಯ | **ರಾಜ್ಯದ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ಖಾಲಿ ಇದ್ದ ಬ್ಯಾಕ್-ಲಾಗ್ ಹುದ್ದೆಗಳನ್ನು ಭರ್ತಿ ಮಾಡಿರುವುದನ್ನು ಗಮನಿಸಲಾಯಿತು. ಇದಕ್ಕೆ ಸಮಿತಿಯು ಘಟನೋತ್ತರ ಅನುಮತಿ ನೀಡಿತು.** |
| ವಿಷಯ 07 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯಕ್ಕೆ ಹೊಸ Printer & xerox ನ್ನು Buyback ಮೂಲಕ ಖರೀದಿಸಿರುವುದಕ್ಕೆ ಘಟನೋತ್ತರ ಅನುಮತಿ ನೀಡುವ ಬಗೆಗೆ.**<br>ಕಸಂವಿಯ ಆಡಳಿತಾಂಗದಲ್ಲಿ ಬಳಕೆಯಲ್ಲಿದ್ದ Canon 2525 printer 5 ವರ್ಷಗಳಿಂದ ಬಳಕೆಯಾಗುತ್ತಿದ್ದು ಇದರ ಸಾಮರ್ಥ್ಯವಾದ 5 ಲಕ್ಷ ಪ್ರಿಂಟ್ ಗಳಿಗೂ ಮೀರಿ 5.28 ಸಾವಿರ ಪ್ರಿಂಟ್ ನೀಡಿದೆ. ಆದ್ದರಿಂದ ಇದನ್ನು Buyback ಮೂಲಕ 15,700 ರೂಗಳಿಗೆ ಮಾರಾಟ ಮಾಡಿ 1,44,620 ರೂಗಳ Canon image Runner 2525 ಪ್ರಿಂಟರ್ ಖರೀದಿಸಲು 1,28,920 ರೂಗಳ ಪಾವತಿಗಾಗಿ ಪ್ರಶಾಸನ ಸಮಿತಿಯ ಅನುಮೋದನೆ ಕೋರಿದೆ. |
| | ನಿರ್ಣಯ | **ವಿಶ್ವವಿದ್ಯಾಲಯಕ್ಕೆ ಹೊಸ Printer & xerox ನ್ನು Buyback ಮೂಲಕ ಖರೀದಿಸಿರುವುದಕ್ಕೆ ಸಮಿತಿಯು ಘಟನೋತ್ತರ ಅನುಮತಿ ನೀಡಿತು.** |
| ವಿಷಯ 08 | ವಿಷಯ ಮತ್ತು ಟಿಪ್ಪಣಿ | **ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ (ರಿ), ಸಿದ್ಧಗಂಗಾ ಮಠ, ತುಮಕೂರು ತಾ॥, ಜಿಲ್ಲೆ. – ಇದರ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ಉದ್ದಾನೇಶ್ವರ ವೇದ – ಸಂಸ್ಕೃತ ಪಾಠಶಾಲೆ, ಮತ್ತು ಶ್ರೀ ಶಿವಕುಮಾರ ಸ್ವಾಮೀಜಿ ವೇದ – ಸಂಸ್ಕೃತ ಪಾಠಶಾಲೆ, ಸಿದ್ಧಗಂಗಾ ಮಠ, ತುಮಕೂರು ತಾ॥, ಜಿಲ್ಲೆ ಈ ಪಾಠಶಾಲೆಗಳಲ್ಲಿನ ಸಾಹಿತ್ಯ ತರಗತಿಗಳ ಸಹ ಶಿಕ್ಷಕ ಹುದ್ದೆಗಳನ್ನು ಸಾಹಿತ್ಯ ವೇತನಶ್ರೇಣಿಗೆ ಮೇಲ್ದರ್ಜೆಗೇರಿಸಿ ಅನುಮೋದಿಸುವ ಬಗೆಗೆ.**<br>ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ (ರಿ), ಸಿದ್ಧಗಂಗಾ ಮಠ, ತುಮಕೂರು ತಾ॥, ಜಿಲ್ಲೆ. – ಇದರ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ಉದ್ದಾನೇಶ್ವರ ವೇದ-ಸಂಸ್ಕೃತ ಪಾಠಶಾಲೆ, ಮತ್ತು ಶ್ರೀ ಶಿವಕುಮಾರ ಸ್ವಾಮೀಜಿ ವೇದ – ಸಂಸ್ಕೃತ ಪಾಠಶಾಲೆ, ಸಿದ್ಧಗಂಗಾ ಮಠ, ತುಮಕೂರು ತಾ॥, ಜಿಲ್ಲೆ – ಈ ಎರಡೂ ಪಾಠಶಾಲೆಗಳಲ್ಲಿನ ಒಟ್ಟು 06 ಸಹ ಶಿಕ್ಷಕ ಹುದ್ದೆಗಳನ್ನು ಸಾಹಿತ್ಯ ವೇತನಶ್ರೇಣಿಗೆ ಮೇಲ್ದರ್ಜೆಗೇರಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ (ರಿ), ಈ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ 2 ಪಾಠಶಾಲೆಗಳ ಒಟ್ಟು 06 ಸಹ ಶಿಕ್ಷಕ ಹುದ್ದೆಗಳನ್ನು ಸಾಹಿತ್ಯ ವೇತನಶ್ರೇಣಿಗೆ ಮೇಲ್ದರ್ಜೆಗೇರಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಪ್ರಶಾಸನ ಸಮಿತಿಯ ಅನುಮೋದಿಸಿತು.** |
| ವಿಷಯ | ವಿಷಯ | **ಎಂಟನೇ ಸ್ನಾತಕಪೂರ್ವ ದೀಕ್ಷಾಂತ ಸಮಾರಂಭಕ್ಕೆ ತಗಲುವ ಅಂದಾಜು ವೆಚ್ಚಕ್ಕೆ ಅನುಮೋದನೆ ನೀಡುವ ಬಗೆಗೆ.** |

| | | |
|---|---|---|
| 09 | ಮತ್ತು ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಸ್ಥಾಪನೆಯಾದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ಕರ್ನಾಟಕ ರಾಜ್ಯದ ಸ್ನಾತಕಪೂರ್ವ ಶಿಕ್ಷಣವನ್ನು ನಿರ್ವಹಿಸುತ್ತಿದ್ದು, 2017–18ನೇ ಸಾಲಿನ ಪರೀಕ್ಷೆಗಳಲ್ಲಿ ವೈಶಿಷ್ಟ್ಯ ಶ್ರೇಣಿಯೊಂದಿಗೆ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಅಭಿನಂದಿಸಲು ಮತ್ತು 2017–18ನೇ ಸಾಲಿನಲ್ಲಿ ಸೇವೆಯಿಂದ ನಿವೃತ್ತರಾದ ಸಂಸ್ಕೃತ ಪಾಠಶಾಲಾ ಶಿಕ್ಷಕರನ್ನು "ಸಂಸ್ಕೃತ ಸೇವಾ ಸನ್ಮಾನ"ದೊಂದಿಗೆ ಅಭಿನಂದಿಸಲು ಪ್ರತಿ ವರ್ಷದಂತೆ ಈ ವರ್ಷವೂ 'ಸ್ನಾತಕಪೂರ್ವ ದೀಕ್ಷಾಂತ ಸಮಾರೋಹ' ಕಾರ್ಯಕ್ರಮವನ್ನು 2018ರ ಆಗಸ್ಟ್ ತಿಂಗಳ ಕೊನೆಯ ವಾರದಲ್ಲಿ ನಡೆಸಲು ತೀರ್ಮಾನಿಸಿದೆ. ಈ ಕಾರ್ಯಕ್ರಮ ನಡೆಸಲು ಅಂದಾಜು ವೆಚ್ಚದ ಪಟ್ಟಿಯನ್ನು ಸಿದ್ಧಪಡಿಸಿದ್ದು, ರೂ. 3.00 ಲಕ್ಷ ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ. ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಎಂಟನೇ ಸ್ನಾತಕಪೂರ್ವ ದೀಕ್ಷಾಂತ ಸಮಾರಂಭಕ್ಕೆ ತಗಲುವ ಅಂದಾಜು ವೆಚ್ಚ ರೂ 3. ಲಕ್ಷಕ್ಕೆ ಸಮಿತಿಯು ಒಪ್ಪಿದೆ.** |
| ವಿಷಯ 10 | ವಿಷಯ ಮತ್ತು ಟಿಪ್ಪಣಿ | **ಹಣಕಾಸು ಅಧಿಕಾರಿಗಳ ಕಾರನ್ನು ಬದಲಾಯಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳು ಬಳಸುತ್ತಿರುವ (ಇಂಡಿಗೋ EC) ಸಂಖ್ಯೆ KA 01. MH 6191 – ಈ ಕಾರು 2012ರ ಮಾಡೆಲ್ ಆಗಿದ್ದು, ಸದರಿ ಕಾರಿನ ಉತ್ಪಾದನೆ ನಿಲ್ಲಿಸಲಾಗಿದೆ. ಈ ಕಾರಿನ ಬಿಡಿ ಭಾಗಗಳು ಮಾರುಕಟ್ಟೆಯಲ್ಲಿ ದೊರಕುತ್ತಿಲ್ಲ. ಈ ಕಾರು 1.15ಲಕ್ಷ ಕಿ.ಮೀ ಚಲಿಸಿದ್ದು 2017–18ನೇ ವರ್ಷದಲ್ಲಿಯೇ ದುರಸ್ತಿಗಾಗಿಯೇ ರೂ 61,122.00 ವೆಚ್ಚವಾಗಿರುತ್ತದೆ. ಅಲ್ಲದೇ ಪುನ: ಈಗಾಲೇ ದುರಸ್ತಿಗೆ ಬಂದಿರುತ್ತದೆ. ಆದ ಕಾರಣ ಸದರಿ ಕಾರನ್ನು Buy Back ಮೂಲಕ ನೂತನ ಕಾರನ್ನು ಖರೀದಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಸಲ್ಲಿಸಿದೆ. |
| | ನಿರ್ಣಯ | **ಹಣಕಾಸು ಅಧಿಕಾರಿಗಳ ಕಾರನ್ನು ಬದಲಾಯಿಸಲು ಸಭೆಯು ಒಪ್ಪಿಗೆ ನೀಡಿತು.** |
| ವಿಷಯ 11 | ವಿಷಯ ಮತ್ತು ಟಿಪ್ಪಣಿ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರೀಕ್ಷಾಂಗದ ಪರೀಕ್ಷಾ ನಿಯಂತ್ರಕರನ್ನು ಬದಲಾಯಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕರಾದ ಡಾ. ಬಿ. ವಿ ವೆಂಕಟರಮಣರವರು ಪರೀಕ್ಷಾ ನಿಯಂತ್ರಕರಾಗಿ 2015 ಫೆಬ್ರವರಿಯಿಂದ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಾ ಬಂದಿರುತ್ತಾರೆ. ಇವರ ಶೈಕ್ಷಣಿಕ ಪ್ರಗತಿಗೆ ತೊಂದರೆಯಾಗುವ ಕಾರಣ, ಮುಂದಿನ ದಿನಗಳಲ್ಲಿ ಇವರು ಪರೀಕ್ಷಾ ನಿಯಂತ್ರಕರ ಹುದ್ದೆಯಿಂದ ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ. ಇವರ ಸ್ಥಾನದಲ್ಲಿ ಬೇರೆ ಅಧಿಕಾರಿಗಳನ್ನು ನಿಯುಕ್ತಿಗೊಳಿಸಲು ಪ್ರಶಾಸನ ಸಮಿತಿಯಲ್ಲಿ ಮಂಡಿಸಿದೆ. |
| | ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರೀಕ್ಷಾಂಗದ ಪರೀಕ್ಷಾ ನಿಯಂತ್ರಕರನ್ನು ಬದಲಾಯಿಸಲು ತಾತ್ವಿಕವಾಗಿ ಒಪ್ಪಿಗೆ ನೀಡಲಾಯಿತು.** |
| ವಿಷಯ 12 | ವಿಷಯ ಮತ್ತು ಟಿಪ್ಪಣಿ | **ಕೈಲಾಸ – ಮಾನಸ ಸರೋವರ ಯಾತ್ರೆಗೆ ಹೋಗಲು ಅನುಮತಿ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಡಾ. ಕೃಷ್ಣ ವೇ. ಜೋಶಿ ರವರು 21 ಜೂನ್ 2018 ರಿಂದ 4 ಜುಲೈ 2018 (14 ದಿನಗಳು) ಕೈಲಾಸ – ಮಾನಸ ಸರೋವರ ಯಾತ್ರೆಗೆ ನೇಪಾಳದ ಮೂಲಕ ಹೋಗಬೇಕಿರುವುದರಿಂದ ವಿದೇಶ ಪ್ರವಾಸಕ್ಕೆ ಅವಕಾಶ ಮಾಡಿಕೊಡುವಂತೆ ಕೋರಿ ಮನವಿ ಸಲ್ಲಿಸಿದ್ದಾರೆ. ಕೈಲಾಸ – ಮಾನಸ ಸರೋವರ ಯಾತ್ರೆಗೆ ಹೋಗಲು ಅನುಮತಿಯನ್ನು ನೀಡಲು ಪ್ರಶಾಸನ ಸಮಿತಿಯಲ್ಲಿ ಮಂಡಿಸಿದೆ. |
| | ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಡಾ. ಕೃಷ್ಣ ವೇ. ಜೋಶಿ ರವರಿಗೆ ಯಾತ್ರೆಗೆ ತೆರಳಲು ಸಭೆಯು ಸಮ್ಮತಿಸಿತು.** |
| ವಿಷಯ 13 | ವಿಷಯ ಮತ್ತು ಟಿಪ್ಪಣಿ | **2017–18ನೇ ಸಾಲಿನ ಜಮಾ–ಖರ್ಚು ತಃಖ್ತೆಗಳನ್ನು ಪರಿಶೀಲಿಸಿ ಆಡಿಟ್ ಮಾಡಿಸಲು ಸಭೆಯ ಅನುಮೋದನೆ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2017–18 ನೇ ಸಾಲಿನ ಜಮಾ ಮತ್ತು ಖರ್ಚಿನ ಲೆಕ್ಕಪತ್ರಗಳು ಅಂತಿಮಗೊಂಡಿದ್ದು ದಿನಾಂಕ: 31.05.2018ರಂದು ನಡೆದ ಹಣಕಾಸು ಸಮಿತಿಯಲ್ಲಿ ಮಂಡಿಸಲಾಗಿತ್ತು. 2017–18ನೇ ಸಾಲಿನ ಲೆಕ್ಕಪರಿಶೋಧನೆ ನಡೆಸಲು ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು ಇವರನ್ನು ಆಹ್ವಾನಿಸಲು ಹಣಕಾಸು ಸಮಿತಿಯ ಒಪ್ಪಿಗೆ ದೊರೆತ ಹಿನ್ನೆಲೆಯಲ್ಲಿ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **2017–18ನೇ ಸಾಲಿನ ಜಮಾ–ಖರ್ಚು ತಃಖ್ತೆಗಳನ್ನು ಪರಿಶೀಲಿಸಿ ಆಡಿಟ್ ಮಾಡಿಸಲು ಸಭೆಯ ಅನುಮೋದನೆ ನೀಡಿತು.** |

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

| | | |
|---|---|---|
| ವಿಷಯ 01 | ವಿಷಯ ಮತ್ತು | **ಪ್ರೊ. ವಿ. ಗಿರೀಶ್ ಚಂದ್ರರವರಿಗೆ ವಿದೇಶ ಪ್ರವಾಸಕ್ಕೆ ಅನುಮತಿ ನೀಡುವ ಮತ್ತು ವಿಶ್ವವಿದ್ಯಾಲಯದ ವತಿಯಿಂದ ಖರ್ಚು ಭರಿಸುವ ಬಗೆಗೆ.**<br>ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಮತ್ತು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾಗಿ |

| | | |
|---|---|---|
| | ಟಿಪ್ಪಣಿ | ಕಾರ್ಯನಿರ್ವಹಿಸುತ್ತಿರುವ ಪ್ರೊ. ವಿ. ಗಿರೀಶ್ ಚಂದ್ರರವರು ದಿನಾಂಕ: 09.07.2018ರಿಂದ 13.07.2018ರವರೆಗೆ ಕೆನಡಾ ದೇಶದ ವ್ಯಾಂಕೋವರ್‌ನಲ್ಲಿ ನಡೆಯಲಿರುವ 17ನೇ ವಿಶ್ವ ಸಂಸ್ಕೃತ ಸಮ್ಮೇಳನದಲ್ಲಿ ಭಾಗವಹಿಸಿ ಪತ್ರವಾಚನ ಮಾಡಲಿದ್ದಾರೆ. ಇವರು ವಿದೇಶ ಪ್ರವಾಸಕ್ಕೆ ಅನುಮತಿ ಕೋರಿರುತ್ತಾರೆ. ಹಾಗೂ ವಿಶ್ವವಿದ್ಯಾಲಯದ ವತಿಯಿಂದ ಖರ್ಚನ್ನು ಭರಿಸಲು ಕೋರಿರುತ್ತಾರೆ. ಪ್ರಯಾಣ ವೆಚ್ಚ, ನೋಂದಣಿ ಶುಲ್ಕ, ವೀಸಾ ಶುಲ್ಕ ಮತ್ತು ಇನ್ನಿತರ ವೆಚ್ಚಗಳಿಗಾಗಿ ಅಂದಾಜು ರೂ 1,80,000 (ಒಂದು ಲಕ್ಷದ ಎಂಭತ್ತು ಸಾವಿರ)ರೂಗಳಾಗಬಹುದೆಂದು ತಿಳಿಸಿರುತ್ತಾರೆ. ಈ ವೆಚ್ಚಗಳ ಪಾವತಿಗಾಗಿ ಪ್ರಶಾಸನ ಸಮಿತಿಯ ಅನುಮೋದನೆ ಕೋರಿದೆ. |
| | ನಿರ್ಣಯ | **ಪ್ರೊ. ವಿ. ಗಿರೀಶ್ ಚಂದ್ರರವರಿಗೆ ವಿದೇಶ ಪ್ರವಾಸಕ್ಕೆ ಅನುಮತಿ ನೀಡಿದೆ. ವಿಶ್ವವಿದ್ಯಾಲಯದ ವತಿಯಿಂದ ಖರ್ಚು ಭರಿಸುವ ಬಗ್ಗೆ ಸರ್ಕಾರದ ನಿಯಮಾನುಸಾರ ಕ್ರಮಕೈಗೊಳ್ಳಬಹುದೆಂದು ಸಭೆಯು ಸೂಚಿಸಿತು.** |
| ವಿಷಯ 02 | ವಿಷಯ ಮತ್ತು ಟಿಪ್ಪಣಿ | **ಡಾ. ವಿ ಶಿವಾನಿರವರಿಗೆ ವಿದೇಶ ಪ್ರಯಾಣಕ್ಕೆ ಅನುಮತಿ ನೀಡುವ ಬಗೆಗೆ.**<br>ವಿಶ್ವವಿದ್ಯಾಲಯದಲ್ಲಿ ಸಹ ಪ್ರಾಧ್ಯಾಪಕರಾಗಿ ಮತ್ತು ಕಾರ್ಯನಿರ್ವಹಿಸುತ್ತಿರುವ ಡಾ. ವಿ ಶಿವಾನಿರವರು ದಿನಾಂಕ: 09.07.2018ರಿಂದ 13.07.2018ರವರೆಗೆ ಕೆನಡಾ ದೇಶದ ವ್ಯಾಂಕೋವರ್‌ನಲ್ಲಿ ನಡೆಯಲಿರುವ 17ನೇ ವಿಶ್ವ ಸಂಸ್ಕೃತ ಸಮ್ಮೇಳನದಲ್ಲಿ ಭಾಗವಹಿಸಿ ಪತ್ರವಾಚನ ಮಾಡಲಿದ್ದಾರೆ. ಇವರು ವಿದೇಶ ಪ್ರವಾಸಕ್ಕೆ ಅನುಮತಿ ಕೋರಿರುತ್ತಾರೆ. ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು ಡಾ. ವಿ ಶಿವಾನಿರವರಿಗೆ ವಿದೇಶ ಪ್ರಯಾಣಕ್ಕೆ ಅನುಮತಿಸಿದೆ.** |
| ವಿಷಯ 03 | ವಿಷಯ ಮತ್ತು ಟಿಪ್ಪಣಿ | **ದಿವಾಕರ್ ಕೆ.ಬಿ ವಾಹನ ಚಾಲಕರು. ಕಸಂವಿ – ಇವರ ವಾರ್ಷಿಕ ಬಡ್ತಿಗಳನ್ನು ಬಿಡುಗಡೆ ಮಾಡುವ ಬಗೆಗೆ.**<br>ಕುಲಸಚಿವರು, ಕಸಂವಿ, ಬೆಂಗಳೂರು, ಇವರ ಪತ್ರ ದಿನಾಂಕ: 16.03.2016ರ ಆದೇಶದಂತೆ ಶ್ರೀ ಕೆ.ಬಿ ದಿವಾಕರ್ ವಾಹನ ಚಾಲಕರು – ಇವರ ಸೇವೆಯನ್ನು ದಿನಾಂಕ: 16.03.2016ರಿಂದ ಜಾರಿಗೆ ಬರುವಂತೆ ನಿಲಂಬನೆಯಲ್ಲಿಡಲಾಗಿತ್ತು. ನಂತರ ಕೆ.ಇ. ರಾಧಾಕೃಷ್ಣ ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಆಂತರಿಕ ವಿಚಾರಣಾ ಸಮಿತಿಯು ಮಾಡಿದ ವರದಿಯನ್ವಯ ಶ್ರೀ ಕೆ.ಬಿ ದಿವಾಕರ್ ಇವರಿಗೆ ಆದೇಶ ಸಂಖ್ಯೆ: ಕಸಂವಿ/ಸಿಬ್ಬಂದಿ ವಾ.ಚಾ 02/2013–14 ದಿನಾಂಕ: 29.08.2017ರನ್ವಯ ಇವರ ವೇತನ ಶ್ರೇಣಿ 12,500–24,000 ರಲ್ಲಿ ದಿನಾಂಕ: 01.09.2016ರಿಂದ ಅನ್ವಯವಾಗುವಂತೆ ಸಂಚಿತ ಪರಿಣಾಮ ಸಹಿತ ವಾರ್ಷಿಕ ವೇತನ ಬಡ್ತಿಯನ್ನು ಕಡಿತಗೊಳಿಸಲಾಗಿದೆ. ಶ್ರೀ ಕೆ.ಬಿ. ದಿವಾಕರ್ ರವರು ದಿನಾಂಕ: 02.03.2018ರಂದು ಮೇಲ್ಮನವಿ ಸಲ್ಲಿಸಿ ಆ ಮನವಿಯಲ್ಲಿ ಹೇಳಿರುವ ಅಂಶಗಳಿಂದಾಗಿ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.<br>ಶ್ರೀ ಕೆ.ಬಿ. ದಿವಾಕರ್, ವಾಹನ ಚಾಲಕರು, ಇವರ ಮನವಿಯನ್ನು ಕರ್ನಾಟಕ ನಾಗರಿಕ ಸೇವಾ(ಸಿಸಿಎ) ನಿಯಮಗಳು– 1957ರ ನಿಯಮ 18(5)ರನ್ವಯ ಪರಿಶೀಲಿಸಲಾಯಿತು. ಸದರಿ ವಾಹನ ಚಾಲಕರಿಗೆ ನೀಡಿರುವ ದಂಡನೆಯು ಕಠಿನ ದಂಡನೆಯಾಗಿದ್ದು ಅದನ್ನು ಮರುಪರಿಶೀಲಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ವಿಷಯ ಮತ್ತು ಕಡತವನ್ನು ಪರಿಶೀಲಿಸಿದೆ. ಆದೇಶ ಸಂಖ್ಯೆ: ಕಸಂವಿ/ಸಿಬ್ಬಂದಿ ವಾ.ಚಾ 02/2013–14 ದಿನಾಂಕ: 29.08.2017ರನ್ವಯ ಇವರ ವೇತನ ಶ್ರೇಣಿ 12,500–24,000 ರಲ್ಲಿ ದಿನಾಂಕ: 01.09.2016ರಿಂದ ಅನ್ವಯವಾಗುವಂತೆ "ಸಂಚಿತ ಪರಿಣಾಮ ಸಹಿತ" ವಾರ್ಷಿಕ ವೇತನ ಬಡ್ತಿಯನ್ನು ಕಡಿತಗೊಳಿಸಲಾಗಿರುವ ಆದೇಶವನ್ನು "ಸಂಚಿತ ಪರಿಣಾಮ ರಹಿತ" ಎಂದು ತಿದ್ದುಪಡಿ ಮಾಡಲು ಸಭೆಯು ಸೂಚಿಸಿತು.** |
| ವಿಷಯ 04 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯದ ಪಿಎಚ್.ಡಿ ಪದವಿಯ ಅವಧಿ ವಿಸ್ತರಿಸುವ ಬಗೆಗೆ.**<br>ಪಿ.ಎಚ್.ಡಿ ಪದವಿಯ ಅವಧಿಯು ಈಗಾಗಲೇ 5 ವರ್ಷಗಳಾಗಿದ್ದು ಅದನ್ನು ಎರಡು ವರ್ಷಗಳ ಕಾಲ ಹೆಚ್ಚಿಸಬಹುದೆಂದು ಅದನ್ನು ಪ್ರಶಿಕ್ಷಣ ಪರಿಷತ್ತಿನಲ್ಲಿ ಅನುಮೋದಿಸಲಾಗಿದೆ. ಅವಧಿ ವಿಸ್ತರಣಾ ಶುಲ್ಕವನ್ನು ನಿಗದಿಪಡಿಸಲು ಪ್ರಶಾಸನ ಸಮಿತಿಯ ಅನುಮೋದನೆಯನ್ನು ಕೋರಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದ ಪಿಎಚ್.ಡಿ ಪದವಿಯ ಅವಧಿ ವಿಸ್ತರಣಾ ಶುಲ್ಕವನ್ನು 10,000 ರೂಗಳಿಗೆ ನಿಗದಿಪಡಿಸಲು ಪ್ರಶಾಸನ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಯಿತು.** |
| ವಿಷಯ 05 | ವಿಷಯ ಮತ್ತು ಟಿಪ್ಪಣಿ | **ವಿದೇಶೀಯ ವಿದ್ಯಾರ್ಥಿಗಳಿಗೆ ಅರ್ಹತಾ ಶುಲ್ಕವನ್ನು ನಿಗದಿಪಡಿಸುವ ಬಗೆಗೆ**<br>ಸಂಸ್ಕೃತ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳಲ್ಲಿ ವಿದೇಶೀಯ ವಿದ್ಯಾರ್ಥಿಗಳು ಪ್ರವೇಶವನ್ನು ಬಯಸಿ ಬರುತ್ತಿರುವ ಹಿನ್ನೆಲೆಯಲ್ಲಿ, ಅಂತಹ ವಿದ್ಯಾರ್ಥಿಗಳಿಗೆ ಅರ್ಹತಾ ಶುಲ್ಕವನ್ನು ನಿಗದಿಪಡಿಸಬೇಕಿದೆ. ಇದರ ಜೊತೆಗೆ ಆಯಾ ಪದವಿಗಳ ನಿಗದಿತ ಶುಲ್ಕವನ್ನೂ ಪಾವತಿಸಬೇಕಿರುತ್ತದೆ. ಅರ್ಹತಾ ಶುಲ್ಕವನ್ನು ನಿಗದಿಪಡಿಸುವ ಸಂಬಂಧ ಪ್ರಶಾಸನ ಸಮಿತಿಯ ಅನುಮೋದನೆಯನ್ನು ಕೋರಿದೆ. |
| | ನಿರ್ಣಯ | **ವಿದೇಶೀಯ ವಿದ್ಯಾರ್ಥಿಗಳಿಗೆ ಅರ್ಹತಾ ಶುಲ್ಕವನ್ನು 15,000 ರೂಗಳಿಗೆ ನಿಗದಿಪಡಿಸಲು ಪ್ರಶಾಸನ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಯಿತು.** |
| ವಿಷಯ 06 | ವಿಷಯ ಮತ್ತು ಟಿಪ್ಪಣಿ | **ಶ್ರೀ ಭಗವದ್ರಾಮಾನುಜಾಚಾರ್ಯರ ಸಹಸ್ರಮಾನೋತ್ಸವದ ನಿಧಿ ಸಂಗ್ರಹಣೆಯ ನಿರ್ವಹಣೆಗಾಗಿ ಆರ್ಥಿಕ ಇಲಾಖೆಯಿಂದ ಒಬ್ಬರನ್ನು ನಾಮನಿರ್ದೇಶನ ಮಾಡುವ ಬಗೆಗೆ.**<br>2017–18ರಲ್ಲಿ ಶ್ರೀ ಭಗವದ್ರಾಮಾನುಜಾಚಾರ್ಯರ ಸಹಸ್ರಮಾನೋತ್ಸವದ ಆಚರಣೆಗಾಗಿ ಅವಶ್ಯವಿರುವ ಅನುದಾನ ನಿಧಿಸಂಗ್ರಹಣೆಯ ನಿರ್ವಹಣೆಗಾಗಿ ಆರ್ಥಿಕ ಇಲಾಖೆಯಿಂದ ಒಬ್ಬರನ್ನು ನಾಮನಿರ್ದೇಶನ ಮಾಡುವ ಬಗ್ಗೆ ಸರ್ಕಾರವನ್ನು ಕೋರಲಾಗಿತ್ತು. ಈ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ಕಾಯ್ದೆ (2000)ದಡಿಯಲ್ಲಿ ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೆ ಪರಮೋಚ್ಚ ಅಧಿಕಾರವಿರುತ್ತದೆ ಎಂದು ತಿಳಿಸಿ ಪತ್ರಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ |

| | | |
|---|---|---|
| | | ನಿಧಿಸಂಗ್ರಹಣೆಯ ನಿರ್ವಹಣೆಗಾಗಿ ಸದಸ್ಯರೊಬ್ಬರನ್ನು ನಾಮನಿರ್ದೇಶನ ಮಾಡಲು ಕೋರಿ ಪ್ರಶಾಸನ ಸಮಿತಿಗೆ ಮಂಡಿಸಿದೆ. |
| | ನಿರ್ಣಯ | **ಶ್ರೀ ಭಗವದ್ರಾಮಾನುಜಾಚಾರ್ಯರ ಸಹಸ್ರಮಾನೋತ್ಸವದ ನಿಧಿ ಸಂಗ್ರಹಣೆಯ ನಿರ್ವಹಣೆಗಾಗಿ ಪ್ರಶಾಸನ ಸಮಿತಿಯ ಸದಸ್ಯರಾದ ಶ್ರೀ ಶಿವಕುಮಾರ್ ಎನ್ ರವರನ್ನು ನಾಮನಿರ್ದೇಶನ ಮಾಡಲು ಸಭೆಯು ಸೂಚಿಸಿತು.** |
| ವಿಷಯ 07 | ವಿಷಯ ಮತ್ತು ಟಿಪ್ಪಣಿ | **ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ಗೆ ಸಂಬಂಧಿಸಿದ ಪರಿಶೀಲನಾ ವರದಿಯ ಬಗೆಗೆ.**<br>ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ಗೆ ಆಗಿಂದಾಗ್ಗೆ ಅಲ್ಲಿನ ಸಿಬ್ಬಂದಿಗಳ ನೇಮಕಾತಿ ಮತ್ತು ಸರ್ಕಾರದ ಅನುದಾನದ ಬಗೆಗೆ ಹಲವು ದೂರು ಅರ್ಜಿಗಳು ಬರುತ್ತಿದ್ದು, ಈ ಬಗೆಗೆ ಪರಿಶೀಲಿಸಿ ವರದಿಯನ್ನು ನೀಡಲು ಸಂಸಂಸಂ/113/ಆ.ವಿ/2016-17; ದಿನಾಂಕ: 17.03.2017ರಂದು ಶ್ರೀ ಯು.ಬಿ. ಉಳವಿ, ನಿವೃತ್ತ ಉಪಕಾರ್ಯದರ್ಶಿಗಳು-ಇವರ ಅಧ್ಯಕ್ಷತೆಯಲ್ಲಿ ಡಾ. ಆರ್.ಆರ್. ಕುಲಕರ್ಣಿ, ನಿವೃತ್ತ ಕುಲಸಚಿವರು ಮತ್ತು ಶ್ರೀ ವೆಂಕಟೇಶ ವಿ., ಸಹಾಯಕ ಕುಲಸಚಿವರು ಇವರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದ್ದಿತು. ಈ ಸಮಿತಿಯು ಪರಿಶೀಲಿಸಿ ದಿನಾಂಕ: 28.11.2017ರಂದು ವರದಿಯನ್ನು ನೀಡಿರುತ್ತಾರೆ. ಈ ವರದಿಯನ್ನು ದಿನಾಂಕ: 22.12.2017 ರಂದು ನಡೆದ ಪ್ರಶಾಸನ ಸಮಿತಿಯ 41ನೇ ಸಭೆಗೆ ಮಂಡಿಸಲಾಗಿತ್ತು. ಈ ಸಭೆಯಲ್ಲಿ ಈ ವರದಿಯನ್ನು ಪರಿಶೀಲಿಸಲು ಮತ್ತೊಂದು ಸಮಿತಿಯನ್ನು ರಚಿಸಲಾಗಿತ್ತು. ಆದರೆ ಸಮಿತಯ ಸದಸ್ಯರು ಸದಸ್ಯತ್ವಕ್ಕೆ ಒಪ್ಪಿಗೆ ಸೂಚಿಸದ ಕಾರಣದಿಂದ ಈ ಹಿಂದಿನ ಸಮಿತಿಯನ್ನು ಪುನರ್ಪರಿಶೀಲಿಸಲು ಕೋರಲಾಗಿತ್ತು. ಅದರಂತೆ ಆ ಸಮಿತಿಯು ಪುನರ್ಪರಿಶೀಲಿಸಿ ವಿಸ್ತೃತ ವರದಿಯನ್ನು ನೀಡಿರುತ್ತಾರೆ. ಈ ವರದಿಯನ್ನು ಈ ಸಭೆಯ ಮುಂದಿನ ನಿರ್ಣಯಕ್ಕೆ ಮಂಡಿಸಿದೆ. |
| | ನಿರ್ಣಯ | **ವರದಿಯನ್ನು ಗಮನಿಸಲಾಯಿತು. ಈ ಸಂಸ್ಕೃತ ಸಂಶೋಧನಾ ಸಂಸತ್‌ನ ನೌಕರರ ದೀರ್ಘ ಸೇವಾವಧಿ ಮತ್ತು ಇವರನ್ನು ಸೊಸೈಟಿ ಅಧಿನಿಯಮದ ಅನುಸಾರವೇ ಸ್ಥಿರೀಕರಣಗೊಳಿಸಿರುವುದರಿಂದ ಹಾಗೂ ಮಾನವೀಯತೆಯ ದೃಷ್ಟಿಯಿಂದ ಈ ವರದಿಯ ಅನುಬಂಧ ಸಿ ಯಲ್ಲಿನ ಗುತ್ತಿಗೆ ಆಧರದ ಮೇಲೆ ನೇಮಕಗೊಂಡು ಹುದ್ದೆಗೆ ನಿಗದಿಪಡಿಸಿದ ಅರ್ಹತೆ ಹೊಂದಿರದ 09 ನೌಕರರನ್ನು ಆಯಾ ಹುದ್ದೆಗಳಲ್ಲಿಯೇ (ಪದೋನ್ನತಿಯನ್ನು ಹೊರತುಪಡಿಸಿ) ಸ್ಥಿರೀಕರಣಗೊಳಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸಭೆಯು ಸೂಚಿಸಿತು.** |

Shilpa
**ಶ್ರೀಮತಿ ಎಂ. ಶಿಲ್ಪ, ಕೆ.ಎ.ಎಸ್.**
ಸದಸ್ಯ ಕಾರ್ಯದರ್ಶಿ

**ಪ್ರೊ. ಪದ್ಮಾಶೇಖರ್**
ಅಧ್ಯಕ್ಷರು